1038 ( 1545)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಧಿಕೃತ ರುದ್ರಭೂಮಿಗಳು ಮತ್ತು ಸಾರ್ವಜನಿಕ ಸ್ಮಶಾನಗಳ ಜವಾಬ್ದಾರಿಯನ್ನು ಯಾರು ನಿರ್ವಹಿಸುತ್ತಾರೆ?

ಆ) ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ನಗರ ಪ್ರದೇಶದಲ್ಲಿ ಇವುಗಳ ನಿರ್ವಹಣೆಯನ್ನು ಯಾರು ತೆಗೆದುಕೊಳ್ಳುತ್ತಾರೆ?

ಇ) ಉಳ್ಳಾಲನಗರ ಪ್ರದೇಶದಲ್ಲಿ ಸಾರ್ವಜನಿಕ ಸ್ಮಶಾನಗಳಿದ್ದು ಇಲ್ಲಿ ಮಳೆಗಾಲದಲ್ಲಿ ದಹನ ಮತ್ತು ಕ್ರಿಯೆಗಳಿಗೆ ಅಡಚಣೆಯಾಗಿರುವುದರಿಂದ ಆಧುನಿಕ ಸ್ಮಶಾನ ನಿರ್ವಹಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ರುದ್ರಭೂಮಿಗಳು ಮತ್ತು ಸಾರ್ವಜನಿಕ ಸ್ಮಶಾನಗಳನ್ನು ಸ್ಥಳೀಯ ಪ್ರಾಧಿಕಾರದವರು ನಿರ್ವಹಿಸುತ್ತಾರೆ.

ಆ) ಗ್ರಾಮಾಂತರ ಪ್ರದೇಶಗಳಲ್ಲಿ ರುದ್ರಭೂಮಿಗಳ ನಿರ್ವಾಹಣೆಯನ್ನು ಗ್ರಾಮಪಂಚಾಯಿತಿಯವರು ನಗರ ಪ್ರದೇಶಗಳಲ್ಲಿ ರುದ್ರಭೂಮಿಗಳ ನಿರ್ವಹಣೆಯನ್ನು ಪುರಸಭೆಗಳು ಮತ್ತು ಮಹಾನಗರಪಾಲಿಕೆಗಳು ನಿರ್ವಹಿಸುತ್ತಿರುತ್ತಾರೆ.

ಇ) ಉಳ್ಳಾಲ ನಗರ ಪ್ರದೇಶದಲ್ಲಿ ಆಧುನಿಕ ವಿದ್ಯುತ್ ಚಿತಾಗಾರವನ್ನು ನಿರ್ಮಿಸಲು ಕರ್ನಾಟಕ ಕೋಸ್ಟಲ್ ಎನ್‌ವಾಯರ್‌ಮೆಂಟಲ್ ಮೇನೇಜ್‌ಮೆಂಟ್ ಮತ್ತು ಅರ್ಬನ್ ಡೆವಲಪ್‌ಮೆಂಟ್ ಪ್ರೊಜೆಕ್ಟ್‌ನಲ್ಲಿ ರೂ. 35.00 ಲಕ್ಷದ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ.

ವಿಷಯ: ಮಂಗಳೂರು ಮಹಾನಗರ ಪಾಲಿಕೆಗೆ ನಾಗರೀಕ ಸೌಲಭ್ಯ

1039 ( 1544)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳೆಯುತ್ತಿರುವ ಮಂಗಳೂರು ಮಹಾನಗರ ಪಾಲಿಕೆಗೆ ನಾಗರೀಕ ಸೌಲಭ್ಯ ಒದಗಿಸಲು ಒಂದು ಮಾಸ್ಟರ್ ಪ್ಲಾನನ್ನು ತಯಾರಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಇದರ ರೂಪುರೇಷೆಗಳೇನು?

ಇ) ಕಿರಿದಾದ ರಸ್ತೆಗಳು, ಕುಡಿಯುವ ನೀರಿನ ಅಸಮರ್ಪಕತೆ, ಸಾರ್ವಜನಿಕ ರುದ್ರಭೂಮಿ, ಪಾರ್ಕ್‌ಗಳು, ವರ್ತುಲರಸ್ತೆಗಳು ಇತ್ಯಾದಿ ಆಧುನಿಕ ನಾಗರೀಕ ಸೌಲಭ್ಯಗಳ ಕಾರ್ಯಕ್ರಮಗಳನ್ನು ಅಳವಡಿಸಲು ಸರ್ಕಾರ ಏನು ಕಾರ್ಯಕ್ರಮಗಳನ್ನು ಅಳವಡಿಸಿದೆ?

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ಮಂಗಳೂರು ಮಹಾನಗರಪಾಲಿಕೆಯು ಮಾಸ್ಟರ್ ಪ್ಲಾನನ್ನು ತಯಾರಿಸಿರುವುದಿಲ್ಲ. ಆದರೆ ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ನೆರವಿನಿಂದ ಮಾಸ್ಟರ್ ಪ್ಲಾನ್ ತಯಾರಿಕೆಯು ಪರಿಶೀಲನೆಯ ಹಂತದಲ್ಲಿದೆ.

ಆ) 'ಅ'ನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 'ಅ'ನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ: ದ.ಕ. ಜಿಲ್ಲೆಯಲ್ಲಿ ಎಂ.ಆರ್.ಪಿ.ಎಲ್.ನಿಂದ ಜಮೀನು ಕಳೆದುಕೊಂಡವರಿಗೆ ಪರಿಹಾರ ಧನ ನೀಡುವುದು.

1040 (1543)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಎಂ.ಆರ್.ಪಿ.ಎಲ್ ಸಂಸ್ಥೆಯವರಿಗೆ ಒದಗಿಸಲಾದ ಒಟ್ಟು ಜಮೀನುಗಳು ಎಷ್ಟು? ಮತ್ತು ಈ ಜಮೀನುಗಳನ್ನು ಯಾರು ಯಾರಿಂದ ಪಡೆದುಕೊಳ್ಳಲಾಯಿತು?

ಆ) ಈ ಜಮೀನು ಸ್ವಾಧೀನಪಡಿಸುವಾಗ ಜಮೀನು ಮತ್ತು ಮನೆ ಕಳೆದುಕೊಂಡವರ ಸಂಖ್ಯೆ ಎಷ್ಟು?

ಇ) ಪರಿಹಾರ ಧನ ನೀಡುವುದಕ್ಕೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) ಒಟ್ಟು 1350 ಎಕರೆ. ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಖಾಸಗಿ ಭೂ ಮಾಲೀಕರಿಂದ ಪಡೆದುಕೊಂಡಿರುತ್ತದೆ.